# ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ- ಕರ್ನಾಟಕ

ರಾಯಚೂರು ಜಿಲ್ಲಾ ಸಮಿತಿ.

ದಿನಾಂಕ : 23/01/2021

ಇವರಿಗೆ,
ಮಾನ್ಯ ಬಿ. ಎಸ್. ಯಡಿಯೂರಪ್ಪನವರು
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

ಮಾನ್ಯರೇ,

ಜಿಲ್ಲಾಧಿಕಾರಿಗಳ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ

ವಿಷಯ: ದೇವದಾಸಿ ತಾಯಂದಿರ ಕುಟುಂಬಕ್ಕೆ ಸಮಗ್ರ ಪುನರ್ವಸತಿ ಕಲ್ಪಿಸಲು ಪ್ರತ್ಯೇಕವಾದ ಅಭಿವೃದ್ಧಿ ಸ್ಥಾಪಿಸಲು ಕೋರಿ ಮನವಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 14 ಜಿಲ್ಲೆಗಳ ದೇವದಾಸಿ ತಾಯಂದಿರು ಮತ್ತು ಮಕ್ಕಳು ಒಟ್ಟಾಗಿ ಸೇರಿಕೊಂಡು ನಮ್ಮದೇ ಆದಂತಹ ವೇದಿಕೆಯನ್ನು ರೂಪಿಸಿಕೊಂಡಿದ್ದೇವೆ ದೇವದಾಸಿ ತಾಯಂದಿರು ಮತ್ತು ಮಕ್ಕಳ ಸ್ಥಿತಿಗತಿಗಳನ್ನು ಕುರಿತು ಮತ್ತು ಅವರ ಅಭಿವೃದ್ಧಿ ಯೋಜನೆಗಳನ್ನು ಕುರಿತು ವಿವಿಧ ಹಂತಗಳಲ್ಲಿ ಚರ್ಚೆಗಳನ್ನು ಮಾಡುತ್ತಾ ಸಂಘಟನೆಯನ್ನು ರೂಪಿಸಿದ್ದೇವೆ. ಕರ್ನಾಟಕದಲ್ಲಿ **46,660** ದೇವದಾಸಿ ಕುಟುಂಬಗಳು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ಸಮಗ್ರವಾಗಿ ಚರ್ಚಿಸಿ, ಸರ್ಕಾರಕ್ಕೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು. ಸಮುದಾಯದ ಮುಖಂಡರು ಸಮುದಾಯದೊಂದಿಗೆ ಕೆಲಸ ಮಾಡುತ್ತಿರುವ ಸಂಘ ಸಂಸ್ಥೆಗಳು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ತಾಯಂದಿರು ಮತ್ತು ಮಕ್ಕಳು ಮಾಡಲು ಕೆಲಸವಿಲ್ಲದೆ ಮನೆಯಲ್ಲೇ ಕುಳಿತು ಜೀವನ ಸಾಗಿಸುತ್ತಿದ್ದಾರೆ. ಅವರ ಜೀವನ ಆಧಾರಗಳು ನಿಂತುಹೋಗಿವೆ. ಅತಂತ್ರವಾಗಿ ಬದುಕುತ್ತಿದ್ದಾರೆ. ಆದ್ದರಿಂದ ದೇವದಾಸಿ ತಾಯಂದಿರ ಕುಟುಂಬಗಳಿಗೆ ದೇವದಾಸಿ ತಾಯಂದಿರ ಸಂಪೂರ್ಣ ಕುಟುಂಬಕ್ಕೆ ಪುನರ್ವಸತಿಯನ್ನು ಒದಗಿಸಬೇಕು ಶಿಕ್ಷಣ, ಉದ್ಯೋಗ, ಆರೋಗ್ಯ, ವಾಸಿಸಲು ಮನೆ, ಭೂಮಿ ಮುಂತಾದ ಮೂಲಭೂತ ಸೌಲಭ್ಯಗಳನ್ನು ನೀಡಬೇಕು. ದೇವದಾಸಿ ಕುಟುಂಬಗಳ ಸಮಗ್ರ ಅಭಿವೃದ್ಧಿಗೆ 2018ರ ದೇವದಾಸಿ ಪದ್ಧತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆ ಜಾರಿಗೆ ತರಬೇಕು. ಸಮುದಾಯಕ್ಕೆ ಅವಶ್ಯವಾಗಿರುವ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಬೇಕು. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿ, ದೇವದಾಸಿ ತಾಯಂದಿರು ಮತ್ತು ಮಕ್ಕಳ ಬೇಡಿಕೆಗಳನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರದ ಮುಂದೆ ದೇವದಾಸಿ ತಾಯಂದಿರು ಮತ್ತು ಮಕ್ಕಳ ಪರವಾಗಿ ಸಲ್ಲಿಸಲಾಗುತ್ತಿದೆ. ಸರ್ಕಾರ ಸೂಕ್ತ ಕ್ರಮವಹಿಸಿ

- ದೇವದಾಸಿ ತಾಯಂದಿರು ಮತ್ತು ಮಕ್ಕಳ ಅಭಿವೃದ್ಧಿಗೆ ಪ್ರತ್ಯೇಕವಾದ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು.
- ದೇವದಾಸಿ ತಾಯಂದಿರು ಮತ್ತು ಮಕ್ಕಳ ಅಭಿವೃದ್ಧಿಗೆ ಆಯವ್ಯಯದಲ್ಲಿ ಪ್ರತ್ಯೇಕ ಅನುದಾನವನ್ನು ನಿಗದಿಗೊಳಿಸಬೇಕೆಂದು ಕೋರಲಾಗಿದೆ.
- ಸಮಗ್ರ ಅಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು ಕಾಲಮಿತಿಯಲ್ಲಿ ಯೋಜನೆಯನ್ನು ರೂಪಿಸಿ, ಜಾರಿ ಮಾಡಬೇಕೆಂದು ಕೋರುತ್ತೇವೆ.

ವಂದನೆಗಳೊಂದಿಗೆ,

27/1/2021

ಇಂತಿ ತಮ್ಮ ವಿಶ್ವಾಸಿ,

ಜಿಲ್ಲಾ ವೇದಿಕೆಯಿಂದ

ಇಂತಿ ತಮ್ಮ ವಿಶ್ವಾಸಿ,

Manjula. M.

63606704 4

ಬೇಡಿಕೆಗಳನ್ನು ಲಗತ್ತಿಸಲಾಗಿದೆ.

ಪ್ರತಿಗಳು:

1. ಮಾನ್ಯ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
2. ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
3. ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
4. ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
5. ವ್ಯವಸ್ಥಾಪಕರು, ಮಹಿಳಾ ಅಭಿವೃದ್ಧಿ ನಿಗಮ, ಕರ್ನಾಟಕ ಸರ್ಕಾರ ಬೆಂಗಳೂರು

ಬೇಡಿಕೆಗಳು

ತಕ್ಷಣ ಮಾಡಬೇಕಾಗಿರುವ ಕೆಲಸಗಳು

1. ಈಗಾಗಲೇ ರಾಜ್ಯ ಸರ್ಕಾರದಲ್ಲಿ ಅನುಮೋದನೆ ಯಾಗಿರುವ ದೇವದಾಸಿ ತಾಯಂದಿರ ಕುಟುಂಬಗಳ ಸಮಗ್ರ ಸಮೀಕ್ಷೆಯನ್ನು ತಕ್ಷಣ ಪ್ರಾರಂಭಿಸಬೇಕು ಅವರ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡು ಸಮಗ್ರವಾದ ಕುಟುಂಬದ ಪುನರ್ವಸತಿಗೆ ಯೋಜನೆಗಳನ್ನು ರೂಪಿಸಬೇಕು
2. ಕೇಂದ್ರ ಸರ್ಕಾರ ಕೇಂದ್ರ ಸರ್ಕಾರದ ನೆರವಿನೊಂದಿಗೆ ದೇವದಾಸಿ ತಾಯಂದಿರು ಮತ್ತು ಮಕ್ಕಳಿಗೆ ಸ್ವಯಂ ಉದ್ಯೋಗ ತರಬೇತಿ ನೀಡಲು ರಾಯಚೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕೇಂದ್ರಗಳನ್ನು ಪ್ರಾರಂಭಿಸಲು ಈಗಾಗಲೇ ಪ್ರಕ್ರಿಯೆ ಜಾರಿಯಲ್ಲಿದ್ದು ಪೂರ್ಣಗೊಳಿಸಬೇಕು ಅದರೊಂದಿಗೆ ವಯೋವೃದ್ಧ ದೇವದಾಸಿ ತಾಯಂದಿರಿಗೆ ಮಕ್ಕಳಿಲ್ಲದೆ ಇದ್ದರೆ ಅವರನ್ನು ನೋಡಿಕೊಳ್ಳಲು ಕೇಂದ್ರ ಸ್ಥಾಪನೆಯಾಗಬೇಕು ಅದರಲ್ಲಿಯೇ ಪೋಷಕರಿಲ್ಲದ ಅನಾಥವಾಗಿರುವ ಅಂತಹ ದೇವದಾಸಿ ಮಕ್ಕಳನ್ನು ವಸತಿಸಹಿತ ಶಿಕ್ಷಣ ನೀಡಲು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕು
3. 20 ವರ್ಷಗಳ ಹಿಂದೆ ಬೇರೆ ಬೇರೆ ಯೋಜನೆಗಳಲ್ಲಿ 40 ಸಾವಿರ ರೂಗಳಿಗೆ ದೇವದಾಸಿ ತಾಯಂದಿರು ಮನೆ ನಿರ್ಮಿಸಿಕೊಂಡಿದ್ದಾರೆ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ ಆದರೆ ಈಗ ಮನೆಗಳು ಬಿದ್ದು ಹೋಗುವ ಸ್ಥಿತಿಯಲ್ಲಿವೆ ಆದ್ದರಿಂದ ಅವರಿಗೆ ಮತ್ತೊಮ್ಮೆ ಮನೆ ನೀಡಲು ಯೋಜನೆಯನ್ನು ರೂಪಿಸಬೇಕು ಊರಿಗೆ ತಾವೇ ಮನೆ ನಿರ್ಮಿಸಿಕೊಳ್ಳುವಷ್ಟು ಸಾಮರ್ಥ್ಯವಿಲ್ಲದೆ ಇರುವುದರಿಂದ ಅವರನ್ನು ಮೂರು ಪರಿಗಣಿಸಿ ಅವರಿಗೆ ಸೂಕ್ತವಾದ ಮನೆ ನಿರ್ಮಿಸಿಕೊಡಬೇಕು
4. ದೇವದಾಸಿ ತಾಯಂದಿರು ಮಕ್ಕಳು ಅರ್ಧದಲ್ಲೇ ಶಾಲೆ ಮತ್ತು ಕಾಲೇಜುಗಳನ್ನು ಬಿಡುತ್ತಿದ್ದಾರೆ ಏಕೆಂದರೆ ಅವರ ತಾಯಂದಿರಿಗೆ ದುಡಿಯಲು ಸಾಧ್ಯವಾಗದೆ ಇರುವಂತಹ ಕುಟುಂಬಗಳಲ್ಲಿ ಮಕ್ಕಳು ಅನಿವಾರ್ಯವಾಗಿ ದುಡಿಯಬೇಕಾದ ಅಂತಹ ವಾತಾವರಣ ರೂಪಗೊಂಡಿದೆ ತಾಯಂದಿರಿಗೆ ಆರೋಗ್ಯದ ಸಮಸ್ಯೆಗಳು ಎದುರಾಗಿರುವ ಸಂದರ್ಭದಲ್ಲಿ ಈ ರೀತಿಯಾದಂತಹ ಸಮಸ್ಯೆಗಳು ಎದುರಾಗುತ್ತಿವೆ ಮನೆ ನಿರ್ವಹಣೆ ಮಾಡಲು ಮಕ್ಕಳು ದುಡಿಯಬೇಕಾದ ಅನಿವಾರ್ಯತೆ ಇದೆ ಆದ್ದರಿಂದ ಇದಕ್ಕೆ ಪರಿಹಾರ ಒದಗಿಸಿ ಕೊಡಬೇಕು
5. ಶಿಕ್ಷಣ ಪಡೆಯುತ್ತಿರುವ ಎಲ್ಲ ದೇವದಾಸಿ ತಾಯಂದಿರು ಮಕ್ಕಳಿಗೆ ವಿಶೇಷವಾದಂತಹ ವಿದ್ಯಾರ್ಥಿವೇತನವನ್ನು ನಿಗದಿಗೊಳಿಸಬೇಕು ಸಮರ್ಪಕವಾಗಿ ಜಾರಿಗೆ ಜಾರಿಗೊಳಿಸಬೇಕು
6. ದೇವದಾಸಿ ಪದ್ಧತಿಗೆ ಒಳಗಾಗಿರುವ ತಾಯಂದಿರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಇರುವಂತಹ ಜಾತಿಗಳಿಗೆ ಸೇರಿರುವ ಮಹಿಳೆಯರೇ ಹೆಚ್ಚಾಗಿ ಕಂಡುಬರುತ್ತಾರೆ ಅದರಲ್ಲಿ ಕೆಲವರು ಹೋಗಿ ಸಮುದಾಯಗಳಿಗೆ ಸೇರಿರುವ ಮಹಿಳೆಯರು ಇದ್ದಾರೆ ಅವರು ಮಕ್ಕಳಿಗೆ ಮದುವೆ ಪ್ರೋತ್ಸಾಹಧನ ದೊರೆಯುವುದಿಲ್ಲ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಯೋಜನೆ ಜಾರಿಯಾಗಿದೆ ಆದರೆ ಅವರು ದೇವರಾಜ್ ಅರಸು ಅಭಿವೃದ್ಧಿ ನಿಗಮದ ಅಡಿಯಲ್ಲಿ ಅವರ ಜಾತಿಗಳು ಬರುವುದರಿಂದ ಅಭಿವೃದ್ಧಿ ನಿಗಮದಲ್ಲಿ ಯೋಜನೆಯನ್ನು ಜಾರಿಗೊಳಿಸಬೇಕೆಂದು ಕೋರುತ್ತೇವೆ
7. 1993, 2007 ಮತ್ತು 2008ರಲ್ಲಿ ಕರ್ನಾಟಕ ಸರ್ಕಾರ ಕೈಗೊಂಡಿರುವ ದೇವದಾಸಿ ತಾಯಂದಿರ ಸಮೀಕ್ಷೆಯಲ್ಲಿ ಅನೇಕ ದೇವದಾಸಿ ತಾಯಂದಿರು ಸೇರ್ಪಡೆಯಾಗಿಲ್ಲ ಆದ್ದರಿಂದ ಮತ್ತೊಮ್ಮೆ ಸಮಗ್ರವಾದ ದೇವದಾಸಿ ತಾಯಂದಿರ ಸಮೀಕ್ಷೆಯನ್ನು ಕೈಗೊಳ್ಳಬೇಕು ಹಾಗೂ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲು ಕ್ರಮವಹಿಸಬೇಕು ಗುರುತಿಸಲ್ಪಡುವ ದೇವದಾಸಿಯರಿಗೆ ಸಮಗ್ರ ವಾದಂತಹ ಪುನರ್ವಸತಿ ಯೋಜನೆಯನ್ನು ರೂಪಿಸಿ ಅವರನ್ನು ಮುಖ್ಯವಾಹಿನಿ ಅಭಿವೃದ್ಧಿಯೊಂದಿಗೆ ಜೋಡಿಸಬೇಕು
8. ದೇವದಾಸಿ ತಾಯಂದಿರು ಶೇಕಡ 85 ರಷ್ಟು ಜನ ಅನಕ್ಷರಸ್ಥರು ಅವರುಗಳಿಗೆ ಸರಿಯಾಗಿ ಯೋಜನೆಗಳ ಬಗ್ಗೆ ಮಾಹಿತಿ ಇರುವುದಿಲ್ಲ ಸಮರ್ಪಕವಾದ ಮಾಹಿತಿಯನ್ನು ತಾಯಂದಿರಿಗೆ ನೀಡಬೇಕು ಮತ್ತು ಅವರಿಗೆ ನೀಡುತ್ತಿರು ವಂತಹ ಸ್ವಯಂ ಉದ್ಯೋಗ ಯೋಜನೆಗಳು ಮೊತ್ತವನ್ನು ಹೆಚ್ಚಿಸಬೇಕು 10 ಲಕ್ಷದವರೆಗೆ
9. ದೇವದಾಸಿ ತಾಯಂದಿರ ಸಂಪೂರ್ಣ ಕುಟುಂಬಕ್ಕೆ ಪುನರ್ವಸತಿಯನ್ನು ಒದಗಿಸಬೇಕು ಶಿಕ್ಷಣ ಉದ್ಯೋಗ ಆರೋಗ್ಯ ವಾಸಿಸಲು ಮನೆ ಮುಂತಾದ ಮೂಲಭೂತ ಸೌಲಭ್ಯಗಳನ್ನು ನೀಡಬೇಕು
10. ಕೋವಿಡ್–19 ದಿಗ್ಬಂಧನ ಸಂದರ್ಭದಲ್ಲಿ ದೇವದಾಸಿ ತಾಯಂದಿರು ಮತ್ತು ಮಕ್ಕಳಿಗೆ ಆರೋಗ್ಯ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕು.
11. ದೇವದಾಸಿ ತಾಯಂದಿರ ಕುಟುಂಬದ ಎಲ್ಲಾ ಸದಸ್ಯರಿಗೂ ಆಗುವಷ್ಟು ಮಾಸ್ಕ್, ಗ್ಲೌಸ್, ಸಾನಿಟೈಸರ್, ಸೋಪು ಮುಂತಾದ ಪ್ರಾಥಮಿಕ ಆರೋಗ್ಯ ಸಲಕರಣೆಗಳನ್ನು ನೀಡಬೇಕು.

12. ತ್ರಿವಿಧ ೩ ತಾಯಂದಿರಿಗೆ ನಿಗದಿಯಾಗಿರುವ ಕೆಲವು ಸೌಲಭ್ಯಗಳನ್ನು ಪಡೆದುಕೊಳ್ಳಲು ದೇವದಾಸಿ ತಾಯಂದಿರು ಮಧ್ಯವರ್ತಿಗಳ ಮೇಲೆ ಅವಲಂಬಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ ಕೆಲವು ಸಂಘಟನೆಗಳು ಮತ್ತು ಸಮುದಾಯದ ಮುಖಂಡರುಗಳು ಸೌಲಭ್ಯಗಳನ್ನು ನೀಡಲು ದೇವದಾಸಿಯರಿಂದ ಪಡೆಯುತ್ತಿರುವುದು ಎಲ್ಲ ಜಿಲ್ಲೆಗಳಲ್ಲೂ ಕಂಡುಬರುತ್ತಿದೆ ಆದ್ದರಿಂದ ಉದಾ: ದೇವದಾಸಿ ತಾಯಂದಿರಿಗೆ ಇರುವ ಯೋಜನೆಗಳನ್ನು ನೇರವಾಗಿ ತಲುಪಿಸಬೇಕು ಯಾವುದೇ ರೀತಿಯಾದಂತಹ ಮಧ್ಯವರ್ತಿಗಳ ಪ್ರವೇಶವನ್ನು ಪ್ರೋತ್ಸಾಹಿಸಬಾರದು ಜಾರಿಯಲ್ಲಿರುವ ಪದ್ಧತಿಯನ್ನು ತನಿಖೆಗೊಳಪಡಿಸಬೇಕು ಅರ್ಹತೆ ಇರುವ ಎಲ್ಲಾ ದೇವದಾಸಿ ತಾಯಂದಿರಿಗೆ ಸೌಲಭ್ಯಗಳನ್ನು ನೀಡಬೇಕು
13. ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಂಘಟನೆಗಳು ಒಟ್ಟಾಗಿ ಸಂಪೂರ್ಣ ದೇವದಾಸಿ ಪದ್ಧತಿ ನಿಷೇಧ ಮತ್ತು ಪುನರ್ವಸತಿಗಾಗಿ ಕೆಲಸ ಮಾಡಬೇಕು
14. ಸರ್ಕಾರದಲ್ಲಿ ಅಸ್ತಿತ್ವದಲ್ಲಿರುವ ಪುನರ್ವಸತಿ ಯೋಜನೆಯಲ್ಲಿ ಎಲ್ಲ ದೇವದಾಸಿ ತಾಯಂದಿರಿಗೂ ಸಮರ್ಪಕವಾಗಿ ಸೌಲಭ್ಯಗಳನ್ನು ನೀಡಲು ಹಣಕಾಸಿನ ಸಮಸ್ಯೆ ಕಾಡುತ್ತಿದೆ ಆದ್ದರಿಂದ ದೇವದಾಸಿ ತಾಯಂದಿರು ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ದೇವದಾಸಿ ತಾಯಂದಿರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ಕಾಲಮಿತಿಯಲ್ಲಿ ಎಲ್ಲ ದೇವದಾಸಿ ತಾಯಂದಿರಿಗೆ ಸೌಲಭ್ಯಗಳನ್ನು ಒದಗಿಸಿ ಸಮಗ್ರ ಅಭಿವೃದ್ಧಿಗೆ ಪ್ರಯತ್ನಿಸಬೇಕು
15. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಅತ್ಯಂತ ಹಿಂದುಳಿದ ಸಮುದಾಯವಾಗಿರುವ ದೇವದಾಸಿ ತಾಯಂದಿರಿಗೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪ ಯೋಜನೆಯ ಹಣವನ್ನು ಮೀಸಲಿಟ್ಟು ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಬೇಕು

**ರ್ಘಕಾಲಿಕ ಬೇಡಿಕೆಗಳು:**

1. ದೇವದಾಸಿ ತಾಯಂದಿರ ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಅವರನ್ನು ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಬೇಕು. ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಇರುವ ಯುವಕ-ಯುವತಿಯರಿಗೆ ಸ್ವಯಂ ಉದ್ಯೋಗ ತರಬೇತಿ ನೀಡಿ ಪ್ರೋತ್ಸಾಹಧನ ನೀಡುವುದರ ಮೂಲಕ ಉದ್ಯೋಗವನ್ನು ಪ್ರಾರಂಭಿಸಲು ಕ್ರಮವಹಿಸಬೇಕು.
2. ದೇವದಾಸಿ ತಾಯಂದಿರ ಕುಟುಂಬಗಳಿಗೆ ಆದ್ಯತೆಯ ಮೇಲೆ ಭೂಮಿಯನ್ನು ನೀಡುವ ಯೋಜನೆಯನ್ನು ಶೀಘ್ರಗತಿಯಲ್ಲಿ ಜಾರಿಗೊಳಿಸಬೇಕು.
3. ಭೂಮಿ ಹೊಂದಿರುವ ಎಲ್ಲಾ ದೇವದಾಸಿ ತಾಯಂದಿರಿಗೆ 'ಗಂಗಾ ಕಲ್ಯಾಣ' ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸಿ ಅದಕ್ಕೆ ಪೂರಕವಾದಂತಹ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಬೇಕು.
4. ದೇವದಾಸಿ ತಾಯಂದಿರ ಎಲ್ಲ ಕುಟುಂಬಗಳಿಗೆ ಸಮಗ್ರವಾದ ಆರೋಗ್ಯ ಯೋಜನೆಯನ್ನು ರೂಪಿಸಿ, ವಿಶೇಷ ಆರೋಗ್ಯ ಚೀಟಿಯನ್ನು ನೀಡಬೇಕು. ಮತ್ತು ಉಚಿತವಾಗಿ ವೈದ್ಯಕೀಯ ಸೌಲಭ್ಯಗಳನ್ನು ಎಲ್ಲ ಅಂಶಗಳನ್ನು ನೀಡಬೇಕು.
5. ಕೋವಿಡ್-19 ದಿಗ್ಬಂಧನ ಕಾಲಾವಧಿಯಲ್ಲಿ ಯೋಜನೆಗಳನ್ನು ರೂಪಿಸುವಾಗ ಈ ಸಮುದಾಯವು ಸ್ವಾವಲಂಬಿಗಳಾಗಿ ಬದುಕಲು ಬೇಕಾದ ಸೂಕ್ತ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು. ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಬೇಕು.
6. ಸಾಮೂಹಿಕ ಕೃಷಿ ಮಾಡಲು ಭೂಮಿ ಮತ್ತು ಅದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಸರ್ಕಾರ ಒದಗಿಸಿಕೊಟ್ಟು ದೇವದಾಸಿ ತಾಯಂದಿರಿಗೆ ಮತ್ತು ಮಕ್ಕಳಿಗೆ ಸಾಮೂಹಿಕ ಕೃಷಿಯ ತರಬೇತಿಯನ್ನು ನೀಡಬೇಕು
7. 2018ರಲ್ಲಿ ದೇವದಾಸಿ ಪದ್ಧತಿ ನಿಷೇಧ ನಿಬಂಧ ಮತ್ತು ಪುನರ್ವಸತಿ ಕಾಯ್ದೆ ಕಾರ್ಡನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಕಾಯ್ದೆಯನ್ನು ತಕ್ಷಣ ಜಾರಿಗೆ ತರಬೇಕು.